**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.462/2024</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಸಂದೇಶ್ ಬಿ.ಎನ್ | ಪ್ರಾಸಾ -5 |
| ತಂದೆಯ ಹೆಸರು | : ಲಕ್ಷ್ಮೀ ಗೌಡ | ಚಾಸಾ-6 |
| ವಯಸ್ಸು | : 38 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಗುತ್ತಿಗೆದಾರ | ದಿನಾಂಕಃ 02.05.2025 |
| ವಾಸಸ್ಥಳ | : ಬಣಕಲ್ | |

**<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ಚಾಸಾ-1 ಮತ್ತು 7 ರವರ ಪರಿಚಯ ನನಗಿದೆ. ಚಾಸಾ-8 ರವರ ಪರಿಚಯ ನನಗಿರುವುದಿಲ್ಲ.

ಸಾಕ್ಷಿಯು ನಿಪಿ-3 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ನಿಪಿ-4 ರ ಪೋಟೋದಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ನಿಪಿ-5 ರ ಅಮಾನತು ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು. ನಿಪಿ-6 ರ ಪೋಟೋದಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ನಿಪಿ-3 ರಲ್ಲಿರುವ ಸಹಿಯನ್ನು ದಿ.02.11.2023 ರಂದು ಹಾಕಿರುತ್ತೇನೆ ಎಂದರೆ ಸರಿ. ಸದರಿ ಸಹಿಯನ್ನು ಅಣ್ಣಪ್ಪ ದೇವಸ್ಥಾನದಿಂದ 2 ಕೀ.ಮೀ. ಹಿಂದೆ. ಸದರಿ ಸಹಿಯನ್ನು ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಹಾಕಿರುತ್ತೇನೆ. ಸದರಿ ಸ್ಥಳವನ್ನು ಬಸ್ ನ ವಿಚಾರಕ್ಕೆ ಗಲಾಟೆಯಾದ ಸಂಭಂದ ತೋರಿಸಲಾಗಿರುತ್ತದೆ. ನಾನು ನಿಪಿ-3 ಕ್ಕೆ ಸುಮಾರು 10.00 ರ ಸಮಯಕ್ಕೆ ಸಹಿ ಹಾಕಿರುತ್ತೇನೆ. ನಾನು ಮತ್ತು ಚಾಸಾ-7 ರವರು ನಿಪಿ-3 ಕ್ಕೆ ಸಹಿಯನ್ನು ಹಾಕಿರುತ್ತೇನೆ. ನಂತರ ಪೋಲಿಸರು ಸ್ಥಳ ಮಹಜರ್ ಮಾಡಿರುತ್ತಾರೆ. ಎಂ.ಒ.1 ನ್ನು ನೋಡಿ ಸಾಕ್ಷಿಯು ಅದನ್ನು ಗುರುತಿಸಲು ನಿರಾಕರಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಪ್ರಾಜ್ಞ್ಯಾಸ.ಸ.ಅ. ರವರಿಂದ:</u>**

ನಾನು ದಿ.02.11.2023 ರಂದು ನಿಪಿ-3 ಕ್ಕೆ ಸಹಿ ಮಾಡಿದಾಗ ಸಂಜೆ ಸುಮಾರು 5.00 ರಿಂದ 6.00 ರ ಸಮಯವಾಗಿತ್ತು ಎಂದರೆ ಸರಿಯಲ್ಲ. ನಿಪಿ-4 ನ್ನು ಕೃತ್ಯ ನಡೆದ ಸ್ಥಳದಲ್ಲಿ ತೆಗೆಯಲಾಗಿರುತ್ತದೆ ಎಂದರೆ ಸರಿ. ನಿಪಿ-5 ರ ಸಹಿಯನ್ನು ದಿ.10.11.2023 ರಂದು ಚಾಸಾ-1 ರವರು ಬಣಕಲ್ ಪೋಲಿಸ್ ಠಾಣಾ ಆವರಣದಲ್ಲಿ ತಾವು ಧರಿಸಿದ್ಧ ಸಮವಸ್ತ್ರದ ಶರ್ಟ್ ನ್ನು ಹಾಜರುಪಡಿಸಿದಾಗ ಅದನ್ನು ಅಮಾನತುಪಡಿಸಿಕೊಳ್ಳುವ ಸಮಯದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ. ಅದೇ ಸಮಯದಲ್ಲಿ ನಿಪಿ-6 ರ ಫೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿ. ನಿಪಿ-

5 ಕ್ಕೆ ಸಹಿ ಮಾಡುವಾಗ ಸುಮಾರು 10.45 ರಿಂದ 11.00 ಗಂಟೆಯಾಗಿತ್ತು ಎಂದರೆ ಸರಿ.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಹೆಚ್.ಎಸ್.ಆರ್ ವಕೀಲರಿಂದಃ</u>**

ನಾನು ಗುತ್ತಿಗೆದಾರನಾಗಿ ಕೆಲಸ ಮಾಡುತ್ತೇನೆ. ದಿ.02.11.2023 ರ ಮಹಜರ್ ಗೆ ಹಾಜರಾಗುವ ಪೂರ್ವದಲ್ಲಿ ನನಗೆ ಪೋಲಿಸರು ನೋಟೀಸನ್ನು ನೀಡಿರುತ್ತಾರೆ. ಸದರಿ ನೋಟೀಸವನ್ನು ಯಾವ ದಿನಾಂಕದಂದು ನೀಡಲಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಸದರಿ ನೋಟೀಸನ್ನು ಯಾವ ಪೋಲಿಸರು ನೀಡಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ಚಾರ್ಮಡಿ ಘಾಟ್ ನನಲ್ಲಿ ಎಷ್ಟು ನೋಡುವಂತಹ ಸ್ಥಳ ಸಾಕ್ಷಿಯು 4-5 ಎಂದು ನುಡಿಯುತ್ತಾರೆ. ನಿಪಿ-4 ರಲ್ಲಿ ನೋಡುವಂತಹ ಜಾಗ ಕಾಣುವುದಿಲ್ಲ ಎಂದರೆ ಸರಿ. ಸದರಿ ಫೋಟೋವನ್ನು ಯಾವುದೋ ಒಂದು ರಸ್ತೆಯಲ್ಲಿ ನಿಂತು ತೆಗೆಯಲಾಗಿದೆ ಎಂದರೆ ಸರಿ. ನನಗೆ ಬಣಕಲ್ ಪೋಲಿಸ್ ಠಾಣೆಯಲ್ಲಿ ಪೋಲಿಸರು ಪರಿಚಯವಿರುತ್ತದೆ. ಈ ಹಿಂದೆ ನಾನು ಯಾವುದೇ ಮಹಜರ್ ಸಾಕ್ಷಿಯಾಗಿ ಸಹಿಯನ್ನು ಮಾಡಿರುವುದಿಲ್ಲ. ಮಹಜರ್ ಬರೆಯುವ ಸಮಯದಲ್ಲಿ ಎಷ್ಟು ಜನ ಹಾಜರಿದ್ದರು ಎಂದು ನನಗೆ ತಿಳಿದಿರುವುದಿಲ್ಲ. ಸದರಿ ಸ್ಥಳವನ್ನು ಬಸ್ ನ ಚಾಲಕ ನನಗೆ ತೋರಿಸಿರುತ್ತಾರೆ. ಸದರಿ ಮಹಜರ್ ನ್ನು ಯಾರು ಬರೆದರು ಎಂದು ನನಗೆ ತಿಳಿದಿರುವುದಿಲ್ಲ. ಅದು ಎಷ್ಟು ಪುಟ ಇದೆ ಎಂದು ನನಗೆ ತಿಳಿದಿರುವುದಿಲ್ಲ. ಸದರಿ ಮಹಜರ್ ನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನಿಪಿ-5 ನ್ನು ಬರೆದ ಪೂರ್ವದಲ್ಲಿ ನನಗೆ ನೋಟೀಸ್ ನೀಡಿರುವ ಬಗ್ಗೆ ನೆನಪಿರುವುದಿಲ್ಲ.

ಎಂ.ಒ.1 ರಲ್ಲಿ ಸಾಕ್ಷಿದಾರರ ಸಹಿ ಇಲ್ಲ ಎಂದರೆ ಸರಿ. ನಿಪಿ-5 ನ್ನು ಯಾರು ಬರೆದರು ಎಂದು ನನಗೆ ಹೇಳಲು ಸಾಧ್ಯವಿಲ್ಲ. ಆಗಲೂ ಸಹ ಸದರಿ ಮಹಜರ್ ನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನಿಪಿ-3 ಮತ್ತು 5 ನನ್ನ ಸಮಕ್ಷಮ ಬರೆಯಲಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಎರಡೂ ನಿಶಾನೆಗೂ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-3 ನ್ನು ಎಷ್ಟು ಗಂಟೆಗಳ ಕಾಲ ಬರೆಯಲಾಗಿತ್ತು ಎಂದು ನನಗೆ ತಿಳಿದಿರುವುದಿಲ್ಲ. ಆ ಸಮಯದಲ್ಲಿ ಯಾವ ಪೋಲೀಸ್ ಅಧಿಕಾರಿಗಳು ಇದ್ದರು ಎಂದು ನನಗೆ ನೆನಪಿಲ್ಲ. ನನಗೆ ಮಹಜರ್ ಮಾಡಿದ ಜಾಗದ ಚೆಕ್ಕು ಬಂದಿ ಹೇಳಲು ಸಾಧ್ಯವಿಲ್ಲ. ಯಾವುದೇ ಮಹಜರ್ ನನ್ನ ಸಮಕ್ಷಮ ಬರೆಯದಿದ್ದರೂ ನಾನು ಸಹಿ ಹಾಕಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಬಸ್ ನ ಚಾಲಕ ಘಟನಾ ಸ್ಥಳವನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಕೇಸ್ ಗೆ ಸಂಬಂಧಪಟ್ಟಂತೆ ಯಾವುದೇ ವಿಚಾರ ತಳಿಯದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ  ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್  ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.462/2024</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಶಶಾಂಕ್ | ಪ್ರಾಸಾ -6 |
| ತಂದೆಯ ಹೆಸರು | : ದುಗ್ಗೆಶ್ ಆಚಾರ್ | ಚಾಸಾ-7 |
| ವಯಸ್ಸು | : 22 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೊರಿಯರ್ ಬಾಯ್ | ದಿನಾಂಕಃ 02.05.2025 |
| ವಾಸಸ್ಥಳ | : ಬಣಕಲ್ | |

**<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ಚಾಸಾ-1 ಮತ್ತು 6 ರವರ ಪರಿಚಯ ನನಗಿಲ್ಲ.

ಸಾಕ್ಷಿಯು ನಿಪಿ-3 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ನಿಪಿ-4 ರ ಫೋಟೋದಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ದಿ.02.11.2023 ರಂದು ನಾನು ನಿಪಿ-3 ಕ್ಕೆ ಸಹಿಯನ್ನು ಹಾಕಿರುತ್ತೇನೆ. ಸದರಿ ಸಹಿಯನ್ನು ಅಣ್ಣಪ್ಪ ದೇವಸ್ಥಾನದಿಂದ 2 ಕೀ.ಮೀ. ಹಿಂದೆ ಸಹಿ ಹಾಕಿರುತ್ತೇನೆ. ಸದರಿ ಸಹಿಯನ್ನು ಹಾಕುವಾಗ ಬೆ.10.00 ರ ಸಮಯವಾಗಿತ್ತು. ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಹಾಕಿರುತ್ತೇನೆ. ಸದರಿ ಸಹಿಯನ್ನು ಯಾವ ವಿಚಾರಕ್ಕೆ ಹಾಕಿರುತ್ತೇನೆ ಎಂದು ನನಗೆ ತಿಳಿದಿರುವುದಿಲ್ಲ. ನಂತರ ನಿಪಿ-4 ರಂತೆ ಒಂದು ಫೋಟೋವನ್ನು ತೆಗೆಯಲಾಗಿರುತ್ತದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಪ್ರಾಜ್ಞ್ಯಾಸ.ಸ.ಅ. ರವರಿಂದ:</u>**

ದಿ.02.11.2023 ರಂದು ನಿಪಿ-3 ಕ್ಕೆ ಸಹಿ ಮಾಡಿದಾಗ ಸಂಜೆ ಸುಮಾರು 5.00 ರಿಂದ 6.00 ರ ಸಮಯವಾಗಿತ್ತು ಎಂದರೆ ನನಗೆ ನೆನಪಿಲ್ಲ. ಅದೇ ದಿನ ಚಾಸಾ-1 ರವರು ನ್ಯಾಯಾಲಯದ ಮುಂದೆ ಇರುವ ಆರೋಪಿಯೊಡನೆ ಬಸ್ ನ ವಿಚಾರವಾಗಿ ಗಲಾಟೆಯಾದ ಸ್ಥಳ ಇದೆ ಎಂದು ನನ್ನ ಸಮಕ್ಷಮ ಸ್ಥಳ ತೋರಸಿರುತ್ತಾರೆ ಎಂದರೆ ಸರಿ. ಅದೇ ದಿನ ನಾನು ಚಾಸಾ.1 ಮತ್ತು 6 ರವರು ನಿಪಿ-3 ಕ್ಕೆ ಸಹಿ ಮಾಡಿರುತ್ತೇವೆ ಎಂದರೆ ಸರಿ.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಹೆಚ್.ಎಸ್.ಆರ್ ವಕೀಲರಿಂದಃ</u>**

ನಾನು ದ್ವಿತೀಯ ಪಿ.ಯು.ಸಿ ವರೆಗೂ ನನ್ನ ವ್ಯಾಸಂಗವನ್ನು ಮುಗಿಸಿರುತ್ತೇನೆ. ನಿಪಿ-3 ನ್ನು

ಬರೆಯುವ ಪೂರ್ವ ದಲ್ಲಿ ಪೋಲಿಸರು ನನಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ನಿಪಿ-3 ನ್ನು ಬರೆದ ಸ್ಥಳದ ಚೆಕ್ಕು ಬಂದಿಯನ್ನು ಹೇಳಲು ಸಾಧ್ಯವಿಲ್ಲ. ನಿಪಿ-3 ನ್ನು ಯಾರು ಬರೆದರು ಎಂದು ನನಗೆ ತಿಳಿದಿರುವುದಿಲ್ಲ ಮತ್ತು ಅದು ಎಷ್ಟು ಪುಟ ಇತ್ತು ಎಂದು ನನಗೆ ತಿಳಿದಿರುವುದಿಲ್ಲ. ನಾನು ನಿಪಿ-3 ರಲ್ಲಿ ಏನನ್ನು ಬರೆಯಲಾಗಿರುತ್ತದೆ ಎಂದು ತಿಳಿದುಕೊಂಡಿಲ್ಲ. ನಿಪಿ-4 ನ್ನು ಒಂದು ರಸ್ತೆಯ ಮಧ್ಯದಲ್ಲಿ ತೆಗೆಯಲಾಗಿರುತ್ತದೆ ಎಂದರೆ ಸರಿ. ನಿಪಿ-3 ನ್ನು ಬರೆಯುವಾಗ ಎಷ್ಟು ಜನ ಹಾಜರಿದ್ದರು ಎಂದು ಹೇಳಲು ಸಾಧ್ಯವಿಲ್ಲ. ನಿಪಿ-3 ಕ್ಕೆ ನಾನು ಎಷ್ಟು ಸಹಿ ಮಾಡಿರುತ್ತೇನೆ ಎಂದು ಹೇಳಲು ಸಾಧ್ಯವಿಲ್ಲ. ದಿ.02.11.2023 ರಂದು ನನ್ನ ಸಮಕ್ಷಮ ಯಾವುದೇ ಮಹಜರ್ ನಡೆದಿಲ್ಲ ಎಂದರೆ ಸರಿಯಲ್ಲ. ನಿಪಿ-3 ಕ್ಕೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಬಣಕಲ್ ಪೋಲಿಸರು ಪರಿಚಯವಿರುವುದಿಲ್ಲ. ನಾನು ಈ ಹಿಂದೆ ಪಂಚರಾಗಿ ಯಾವುದೇ ಸಹಿ ಮಾಡಿರುವುದಿಲ್ಲ. ಘಟನಾ ಸ್ಥಳವನ್ನು ಬಸ್ ನ ಚಾಲಕ ಮತ್ತು ನಿರ್ವಾಹಕರು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಚಾಸಾ-1 ಮತ್ತು 6 ರವರು ನಿಪಿ-3 ಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಕೇಸ್ ನ ಸಂಬಂಧ ಪಟ್ಟಂತೆ ನನಗೆ ಯಾವುದೇ ವಿಚಾರ ತಿಳಿಯದಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.